# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1358 |
| ಸದಸ್ಯರ ಹೆಸರು | : ಶ್ರೀ. ಕೆ.ಪ್ರತಾಪಚಂದ್ರ ಶೆಟ್ಟಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : 23.09.2021 |
| ಉತ್ತರಿಸುವ ಸಚಿವರು | : ಮಾನ್ಯ ಜಲಸಂಪನ್ಮೂಲ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕರ್ನಾಟಕ ನೀರಾವರಿ ನಿಗಮದಿಂದ ಅನುಷ್ಠಾನಿಸಲ್ಪಡುತ್ತಿರುವ 41 ವರ್ಷಗಳೇ ಕಳೆದರೂ, ಇನ್ನೂ ಕೂಡಾ ಪ್ರಾರಂಭವಾಗದ ವಾರಾಹಿ ನೀರಾವರಿ ಯೋಜನೆಯ ಬಲದಂಡೆ ಯೋಜನೆಯ ಕಾಮಗಾರಿಗಳ ಅಂದಾಜುಪಟ್ಟಿ ತಯಾರಾಗಿದೆಯೇ; ತಯಾರಾಗಿದ್ದಲ್ಲಿ, ಯಾವಾಗ ಅನುಮೋದನೆಗೆ ಸಲ್ಲಿಸಲಾಗಿದೆ; ಅಂದಾಜುಪಟ್ಟಿಗೆ ಮಂಜೂರಾತಿ ನೀಡಲಾಗಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು) | ವಾರಾಹಿ ನೀರಾವರಿ ಯೋಜನೆಯ ಅನುಮೋದಿತ ಯೋಜನಾ ವರದಿಯನ್ವಯ ಕೈಗೊಂಡಿರುವ ವಾರಾಹಿ ಬಲದಂಡೆ ನಾಲಾ ಕಾಮಗಾರಿಗಳ ಪೈಕಿ, ವಾರಾಹಿ ಬಲದಂಡೆ ಸಾಮಾನ್ಯ ನಾಲಾ ಸರಪಳಿ 0.00 ರಿಂದ 18.725ಕಿ.ಮೀ ಕಾಮಗಾರಿ ಪೂರ್ಣಗೊಂಡಿದ್ದು, ನೇರತೂಬುಗಳ ಮೂಲಕ ಸುಮಾರು 300ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸಲಾಗಿರುತ್ತದೆ.<br><br>ಮುಂದುವರೆದು, ಮೂಲ ಯೋಜನಾ ವರದಿಯನ್ವಯ ವಾರಾಹಿ ಬಲದಂಡೆ ಕಾಲುವೆಯು ವಾರಾಹಿ ಬಲದಂಡೆ ಸಾಮಾನ್ಯ ಕಾಲುವೆಯ 18.419ಕಿ.ಮೀ ಸರಪಳಿಯಿಂದ ಆರಂಭಗೊಂಡು 42.73 ಕಿ.ಮೀವರೆಗೆ ಒಟ್ಟು 24.31ಕಿ.ಮೀ ಉದ್ದವನ್ನು ಹೊಂದಿರುತ್ತದೆ.<br><br>ಸದರಿ ನಾಲಾಪಥವು ಅತೀ ಕಡಿದಾದ ಹಾಗೂ ಆಳವಿರುವ ಭೂಪ್ರದೇಶದಲ್ಲಿ ಹಾದುಹೋಗುತ್ತಿದ್ದು, ಸುಮಾರು 30 ಎಕರೆ ರಕ್ಷಿತ ಅರಣ್ಯ ಪ್ರದೇಶದಲ್ಲಿ ಹಾದುಹೋಗುವುದರಿಂದ, ತಾಂತ್ರಿಕವಾಗಿ ಸೂಕ್ಷ್ಮವಾಗಿರುವ ಕಾಲುವೆಯು ಹಾದು ಹೋಗುವಲ್ಲಿ ಅತೀ ಹೆಚ್ಚಿನ ಆಳದ ಭೂಪ್ರದೇಶ ಹಾಗೂ ರಕ್ಷಿತ ಅರಣ್ಯ ಪ್ರದೇಶಗಳನ್ನು ತಪ್ಪಿಸಿ, 18.419ಕಿ.ಮೀರಿಂದ 27.23ಕಿ.ಮೀವರೆಗಿನ ಮುಖ್ಯ ಕಾಲುವೆ, ಉಪಕಾಲುವೆ, ಮೈನರ್ ಹಾಗೂ ಸಬ್-ಮೈನರ್ ಕಾಲುವೆಗಳನ್ನು ಒಳಗೊಂಡಂತೆ ವಿಸ್ತೃತ ಸರ್ವೆ ಕಾರ್ಯ, ವಿನ್ಯಾಸ ತಯಾರಿಕೆ, ಅಡ್ಡಮೋರಿ ಕಾಮಗಾರಿಗಳು ಸೇರಿ 1,800 ಹೆ. ನೀರಾವರಿ ಸೌಲಭ್ಯ ಕಲ್ಪಿಸುವ ಕಾಮಗಾರಿಯ ಅಂದಾಜು ಪಟ್ಟಿಯ ತಯಾರಿಸುವ ಪ್ರಕ್ರಿಯೆಯು ನಿಗಮದ ಹಂತದ ಪರಿಶೀಲನೆಯಲಿದೆ. |
| ಆ | ನೀಡಲಾಗಿದ್ದಲ್ಲಿ ಕಾಮಗಾರಿಗಳ ಟೆಂಡರ್ ಯಾವಾಗ ಕರೆಯಾಗುವುದು; ಅಂದಾಜುಪಟ್ಟಿಗೆ ಮಂಜೂರಾತಿ ನೀಡದೇ ಇದ್ದಲ್ಲಿ, ಯಾವಾಗ ನೀಡಲಾಗುವುದು; ವಿಳಂಬಕ್ಕೆ ಕಾರಣವೇನು; ಯಾರ ಹಿತಾಸಕ್ತಿಗೆ ವಿಳಂಬ ಮಾಡಲಾಗುತ್ತಿದೆ; ರೈತರ ಹಿತಾಸಕ್ತಿಯೇ ಅಥವಾ ವಿದ್ಯುತ್ ಗುತ್ತಿಗೆದಾರರ ಹಿತಾಸಕ್ತಿಯೇ? | |

ಸಂಖ್ಯೆ: ಜಸಂಇ 190 ಎಂಎಲ್‌ಎ 2021

(ಗೋವಿಂದ ಎಂ. ಕಾರಜೋಳ)
ಜಲಸಂಪನ್ಮೂಲ ಸಚಿವರು.